ಸಾಕ್ಷಿ ಯನ್ನು ದಿಃ 28.01.2026 ರಂದು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ದೂರುದಾರರ ಪರ ವಕೀಲರಿಂದ**

1. ನಾನು ಬಿ.ಎ ಪದವೀಧರ ಎಂದರೆ ಸರಿ.
2. ನಿಪಿ - 1 ರ ಚೆಕ್ಕು ಹಾಗೂ ಅದರಲ್ಲಿರುವ ಸಹಿ ನನ್ನದೇ. ಅದರಲ್ಲಿ 6 ಲಕ್ಷ ರೂಪಾಯಿ ಎಂದು ಅಂಕಿಗಳಲ್ಲಿ ಹಾಗೂ ಅಕ್ಷರದಲ್ಲಿ ನಾನೇ ಬರೆದಿರುತ್ತೇನೆ ಎಂದರೆ ಸರಿಯಲ್ಲ.
3. ದೂರುದಾರರು ನಿಮ್ಮ ಸಂಬಂಧಿಕರು ಎಂದರೆ ಸರಿ. ಅವರು ಮೂಲತಃ ವ್ಯವಸಾಯ ಮಾಡುತ್ತಾರೆ ಎಂದರೆ ನನಗೆ ಗೊತ್ತಿಲ್ಲ.
4. ದೂರುದಾರರು ದೊಡ್ಡಕಮರವಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದಲ್ಲಿ ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸುತ್ತಿದ್ದರು ಎಂದರೆ ಸರಿ.
5. ನೀವು ಅವರ ಸಂಬಂಧಿಕರಾದ ಕಾರಣ ನಿಮಗೆ ಅವರ ಮನೆಯ ಎಲ್ಲಾ ವಿಚಾರಗಳು ಗೊತ್ತಿದೆ ಎಂದರೆ ಸರಿಯಲ್ಲ.
6. ದೂರುದಾರರು ಆರ್ಥಿಕವಾಗಿ ಸಬಲವಾಗಿದ್ದಾರೆ ಎಂದರೆ ಸರಿ.
7. ದೂರುದಾರರಿಗೆ ಒಬ್ಬಳೆ ಮಗಳು ಎಂದರೆ ಸರಿ. ಅವರ ಮಗಳು ಈಗಲೂ ಸಹ ಜೆ.ಎಸ್.ಎಸ್. ಕಾನೂನು ಕಾಲೇಜಿನಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.
8. ನೀವು 2002-03 ರಿಂದ 2014-15 ರ ವರೆಗೆ ಕೊಪ್ಪ ಗ್ರಾಮದ ಭಗವತಿ ಫೈನಾನ್ಸ್ ನಲ್ಲಿ ಪಿಗ್ಮಿ ಕಲೆಕ್ಟರ್ ಆಗಿ ಕೆಲಸ ಮಾಡಿರುತ್ತೀರಾ ಎಂದರೆ ಸರಿಯಲ್ಲ. ಸದರಿ ಫೈನಾನ್ಸ್ ನಿಮ್ಮ ಸ್ನೇಹಿತರಾದ ಜಯಂತರವರಿಗೆ ಸೇರಿದ್ದು ಎಂದರೆ ಸರಿಯಲ್ಲ. ಅವರು ನಿಮ್ಮ ಸ್ನೇಹಿತರಾದ ಕಾರಣ ಸದರಿ ಫೈನಾನ್ಸ್‌ಗೆ ನೀವು ಸಹ ಪಾಲುದಾರರು ಎಂದರೆ ಸರಿಯಲ್ಲ.
9. ದೊಡ್ಡಕಮರವಳ್ಳಿ ಗ್ರಾಮದ ಮನು ರವರು ನಿಮಗೆ ಸಂಬಂಧಿಕರು ಎಂದರೆ, ಸರಿ, ಅವರು ದೂರುದಾರರಿಗೂ ಸಹ ಸಂಬಂಧಿಕರು. ಸದರಿ ಮನು ರವರ ತಾಯಿ ಹೆಸರು ಪ್ರೇಮಾ ಎಂದರೆ ಸರಿ.
10. ಸದರಿ ಪ್ರೇಮಾ ರವರಿಂದ ರೂ.4,60,000-00 ಗಳನ್ನು ದಿಃ 26.10.2016 ರಂದು ಪಡೆದುಕೊಂಡಿದ್ದೀರಾ ಎಂದರೆ ಸರಿ. ಸದರಿಯವರಿಗೆ ನೀವು ಹಣ ವಾಪಸ್ ಕೊಡದ ಕಾರಣ ನಿಮ್ಮ ಕುಶಾಲನಗರ ಆಕ್ಸಿಸ್ ಬ್ಯಾಂಕ್ ಚೆಕ್ಕನ್ನು ದಿಃ 22.05.2018 ರಂದು ನೀಡಿದ್ದಿರಾ ಎಂದರೆ ಸರಿ.
11. ಸದರಿ ಚೆಕ್ ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲದ ಕಾರಣ ಅಮಾನ್ಯಗೊಂಡಿದೆ ಎಂದರೆ ಸರಿ. ಆಗ ನಿಮ್ಮ ವಿರುದ್ಧ ಪ್ರೇಮಾ ರವರು ಮಾನ್ಯ ಹಿರಿಯ ನ್ಯಾಯಾಲಯದಲ್ಲಿ ಚೆಕ್ ಪ್ರಕರಣ

ಹಾಕಿದ್ದರು ಎಂದರೆ ಸರಿ.

12. ಸದರಿ ಪ್ರಕರಣದಲ್ಲಿ ನೀವು ರೂ.4,80,000-00 ಮೊತ್ತವನ್ನು ನೀಡಬೇಕು ಎಂದು ಆದೇಶವಾಗಿದೆ ಎಂದರೆ ಸರಿ. ಸದರಿ ಆದೇಶ ಪ್ರಶ್ನಿಸಿ ನೀವು ಹುಣಸೂರಿನ ನ್ಯಾಯಾಲಯದಲ್ಲಿ ಹಾಕಿದ ಅಪೀಲು ಸಹ ವಜಾ ಆಗಿದೆ ಎಂದರೆ ಸರಿ.

13. ಮನು ರವರಿಂದ ದಿಃ 08.06.2017 ರಂದು ನೀವು ಹಾಗೂ ನಿಮ್ಮ ಪತ್ನಿ 10 ಲಕ್ಷ ಹಣವನ್ನು ಪಡೆದುಕೊಂಡು ಅವರಿಂದ ಆನ್ ಡಿಮ್ಯಾಂಡ್ ಪ್ರೋನೋಟ್ ಬರೆದದು ಕೊಟ್ಟಿದ್ದೀರಾ ಎಂದರೆ ಸರಿಯಲ್ಲ, ಖಾಲಿ ಬಾಂಡ್ ಪೇಪರ್ ದುರುಪಯೋಗಪಡಿಸಿಕೊಂಡು ದಾವೆ ಹಾಕಿದ್ದಾರೆ. ಸದರಿ ದಾವೆಗೆ ನಿಮ್ಮ ಭಾವ ಮಧು ಎಂಬುವವರು ಸಾಕ್ಷಿಯಾಗಿದ್ದಾರೆ ಎಂದರೆ ಸರಿ.

14. ನಿಮ್ಮ ಹಣಕಾಸಿನ ವ್ಯವಹಾರದಲ್ಲಿ ತೊಂದರೆ ಆಗಿದ್ದರಿಂದ ಡಿಸೆಂಬರ್ 2014 ರಲ್ಲಿ ದೂರುದಾರರಿಂದ 6 ಲಕ್ಷ ಹಣವನ್ನು ನಗದಾಗಿ ಪಡೆದಿರುತ್ತೀರಾ ಎಂದರೆ ಸರಿಯಲ್ಲ. ಸದರಿ ಹಣವನ್ನು ನೀವು ಅವರಿಗೆ 1 ವರ್ಷದ ಒಳಗಾಗಿ ವಾಪಸ್ ನೀಡುವುದಾಗಿ ಹೇಳಿ ಪಡೆದಿರುತ್ತೀರಿ ಎಂದರೆ ಸರಿಯಲ್ಲ.

15. ಗಂಡಿ ಬಸವನಹಳ್ಳಿ ಗ್ರಾಮದ ಮದನ್ ಸಿ.ಎನ್. ರವರು ನಿಮಗೆ ಪರಿಚಯ ಎಂದರೆ ಸರಿ. ಸದರಿಯವರಿಂದ 2020 ರಲ್ಲಿ ನೀವು 4 ಲಕ್ಷ ಹಣವನ್ನು ಕೈಸಾಲವಾಗಿ ಪಡೆದಿರುತ್ತೀರಾ ಎಂದರೆ ಸರಿಯಲ್ಲ.

16. ಸದರಿ ಮದನ್ ರವರು ಕುಶಾಲನಗರ ನ್ಯಾಯಾಲಯದಲ್ಲಿ ಚೆಕ್ ಪ್ರಕರಣ ಹಾಕಿದ್ದಾರೆ ಎಂದರೆ ಸರಿ. ಸಾಕ್ಷಿ ಮುಂದುವರಿದು ಸದರಿ ಪ್ರಕರಣರಾಜಿ ಯಾಗಿದೆ ಎಂದು ನುಡಿಯುತ್ತಾರೆ.

17. ಮದನ್ ರವರಿಂದ ಪಡೆದ ಹಣವನ್ನು ವಾಪಸ್ ನೀಡದ ಕಾರಣ ದಿಃ 05.03.2025 ರಲ್ಲಿ ನಿಮಗೆ ಶಿಕ್ಷೆಯಾಗಿರುತ್ತದೆ ಎಂದರೆ ಸರಿಯಲ್ಲ, ರಾಜಿಯಾಗಿದೆ.

18. ಗುಮ್ಮನಕೊಲ್ಲಿ ಗ್ರಾಮದ ಉಷಾ ರವರಿಂದ ನೀವು ದಿಃ 27.01.2019 ರಂದು 5 ಲಕ್ಷ ಹಣ ಪಡೆದಿದ್ದೆ ಎಂದರೆ, ಅದು ಸಹ ರಾಜಿಯಾಗಿದೆ. ಸದರಿಯವರೊಂದಿಗೆ ನೀವು ದಿಃ 25.10.2024 ರಂದು 5 ಲಕ್ಷಕ್ಕೆ ರಾಜಿ ಮಾಡಿಕೊಂಡಿದ್ದೀರಾ ಎಂದರೆ ಸರಿ.

19. ನೀವು ಆರ್ಥಿಕವಾಗಿ ತೊಂದರೆಯಲ್ಲಿ ಇದ್ದರಿಂದ ಸುಮಾರು ಜನರಿಂದ ಹಣ ಪಡೆದು ವಾಪಸ್ ನೀಡದ ಕಾರಣ ನಿಮ್ಮ ಮೇಲೆ ಹಲವಾರು ಚೆಕ್ ಪ್ರಕರಣಗಳು ದಾಖಲಾಗಿವೆ ಎಂದರೆ ಸರಿಯಲ್ಲ.

20. ನೀವು ದೂರುದಾರರಿಂದ ಹಣ ಪಡೆದ ನಂತರ ಹಲವಾರು ಜನರಿಗೆ ಹಣ ಕೊಡಬೇಕಾದರಿಂದ 4-5 ವರ್ಷ ನೀವು ಕೊಪ್ಪ ಗ್ರಾಮದಲ್ಲಿ ವಾಸವಿರುಲಿಲ್ಲ ಎಂದರೆ ಸರಿಯಲ್ಲ.

21. 2019 ರಲ್ಲಿ ನೀವು ಕೊಪ್ಪ ಗ್ರಾಮಕ್ಕೆ ಬಂದ ಸಮಯದಲ್ಲಿ ದೂರುದಾರರು ಹಾಗೂ

ಸಂಭಂಧಿಕರು ಹಾಗೂ ಗ್ರಾಮಸ್ಥರು ಹಣ ಕೇಳಲು ಬಂದಾಗ ಅವರ ವಿರುದ್ಧ ನೀವು ಸುಳ್ಳು ದೂರು ನೀಡಿದ್ದೀರಾ ಎಂದರೆ ಸರಿಯಲ್ಲ.

22. ಕೊಪ್ಪ ಗ್ರಾಮದ ಹಿರಿಯರನ್ನು ಠಾಣೆಗೆ ಕರೆಸಿ ರಾಜಿ ಸಂಧಾನ ಮಾಡಿದ್ದರಿಂದ ದಿಃ 09.05.2019 ರಿಂದ 20 ತಿಂಗಳ ಒಳಗಾಗಿ 6 ಲಕ್ಷ ಹಣವನ್ನು ಕೊಡವುದಾಗಿ ಒಪ್ಪಿಕೊಂಡಿದ್ದೀರಾ ಎಂದರೆ, ಅವರು 4-5 ಚೆಕ್ ಇಟ್ಟುಕೊಂಡು ಬ್ಲಾಕ್ ಮೇಲ್ ಮಾಡುತ್ತಿದ್ದರಿಂದ ಅವರೇ ಬರೆದುಕೊಂಡಿರುತ್ತಾರೆ ಎಂದು ನುಡಿಯುತ್ತಾರೆ.

23. ಸಾಕ್ಷಿಗೆ ದಿಃ 09.05.2019 ರ ಒಂದು ಹೇಳಿಕೆಯಲ್ಲಿನ ಸಹಿ ನೋಡಿ ತನ್ನದು ಎಂದು ಗುರುತಿಸಿದ್ದು, ಸದರಿ ದಾಖಲೆಯನ್ನು ನಿಪಿ - 24 ಎಂದು ಗುರುತಿಸಲಾಯಿತು.

24. ಸದರಿ ಹೇಳಿಕೆ ಪ್ರಕಾರ ನೀವು 20 ತಿಂಗಳಲ್ಲಿ ಹಣ ವಾಪಸ್ ನೀಡದ ಕಾರಣ ಅವರು ನಿಮ್ಮನ್ನು ಹಣ ಕೇಳಲು ಬಂದಾಗ, ನೀವು ನೀಡಿರುವ ಚೆಕ್ಕನ್ನು ಬ್ಯಾಂಕಿಗೆ ಹಾಜರುಪಡಿಸಿ ನಗದೀಕರಿಸಿಕೊಳ್ಳುವಂತೆ ಹೇಳಿರುತ್ತೀರಾ ಎಂದರೆ ಸರಿಯಲ್ಲ.

25. ಆ ಕಾರಣಕ್ಕೆ ದೂರುದಾರರು ದಿಃ26.02.2021 ರಂದು ಬ್ಯಾಂಕಿಗೆ ಹಾಜರುಪಡಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಂತರ ದಿಃ 01.03.2021 ರಂದು ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣವಿಲ್ಲ ಹಿಂಬರಹದೊಂದಿಗೆ ಸದರಿ ಚೆಕ್ ವಾಪಸಾಗಿದೆ ಎಂದರೆ ಸರಿಯಲ್ಲ. ಸದರಿ ವಿಚಾರವನ್ನು ದೂರುದಾರರು ನಿಮಗೆ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ.

26. ನಿಪಿ-5 ರ ಅಂಚೆ ಸ್ವೀಕೃತಿಯಲ್ಲಿರುವ ಸಹಿ ನನ್ನದು. ಬ್ಯಾಂಕ್ ಹಿಂಬರಹದ ಆಧಾರದ ಮೇಲೆ ದೂರುದಾರರು ನಿಮಗೆ ತಿಳುವಳಿಕೆ ನೋಟೀಸು ನೀಡಿದ್ದು, ಅದು ನಿಮಗೆ ಜಾರಿಯಾಗಿದೆ ಎಂದರೆ ಸರಿ. ಅದಕ್ಕೆ ನೀವು ಪ್ರತ್ಯುತ್ತರ ನೀಡಿಲ್ಲ ಎಂದರೆ, ನನ್ನ ತಾಯಿಯ ಆರೋಗ್ಯ ಸರಿ ಇಲ್ಲದ ಕಾರಣ ನೀಡಿಲ್ಲ.

**(ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.) ಓ ಹೇ ಕೇ ಸ ಇ ಓ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಪಿರಿಯಾಪಟ್ಟಣ